

# ಅನೂಷ್ಕಾ ಮದುವೆಯಂತೆ!



ಎಲ್ಲೆಡೆ 'ಬಾಹುಬಲಿ' ಚಿತ್ರದ ನಾಯಕಿ ಅನೂಷ್ಕಾ ಶೆಟ್ಟಿಯ ಬಗ್ಗೆಯೇ ಮಾತು. ಬಾಹುಬಲಿ ತಂಡದ ಜತೆಗೆ ಪ್ರೇಕ್ಷಕರು ನೇರವಾಗಿ ಪ್ರಶ್ನೆ ಕೇಳುವ ಅಂತರ್ಜಾಲ ಪ್ರಸಾರದ ಕಾರ್ಯಕ್ರಮದಲ್ಲಿ 'ನೀವು ಕನ್ನಡದಲ್ಲಿ ನಟಿಸುತ್ತೀರಾ?' ಎಂಬ ಪ್ರಶ್ನೆಗೆ ಅನೂಷ್ಕಾ ಕನ್ನಡದಲ್ಲಿಯೇ ಉತ್ತರಿಸಿದಳಂತೆ. 'ಅವಕಾಶ ಸಿಕ್ಕರೆ ಖಂಡಿತಾ ನಟಿಸುತ್ತೇನೆ' ಎಂದಳಂತೆ. ಮಂಗಳೂರಿನಲ್ಲಿ ಹುಟ್ಟಿ ಬೆಂಗಳೂರಿನಲ್ಲಿ ಓದಿದ ಈ ಕರಾವಳಿ ಸುಂದರಿ ಸದ್ಯಕ್ಕೆ ಟಾಲಿವುಡ್ ಮಾತ್ರವಲ್ಲ, ಬಾಲಿವುಡ್‌ನಲ್ಲೂ ಖ್ಯಾತ ನಾಯಕಿಯರ ನಿದ್ದೆಗೆಡಿಸಿದ್ದಾಳಂತೆ. ಏಕೆಂದರೆ ಬಾಲಿವುಡ್‌ನ ಬಹಳಷ್ಟು ಹೀರೋಗಳು ಅನೂಷ್ಕಾಳನ್ನು ತಮ್ಮ ಮುಂದಿನ ಚಿತ್ರದ ನಾಯಕಿಯಾಗಿಸಲು ಆಸಕ್ತಿ ತೋರುತ್ತಿದ್ದಾರಂತೆ.

ಅನೂಷ್ಕಾಳ ಹೊಸ ಚಿತ್ರ 'ಭಾಗ್ಮತಿ' ಒಂದು ಪೌರಾಣಿಕ ಚಿತ್ರವೇ ಇರಬೇಕೆಂದು ಹಲವರು ಭಾವಿಸಿದ್ದಾರೆ. ಆದರೆ ಅದೊಂದು ಥ್ರಿಲ್ಲರ್ ಚಿತ್ರ ಎಂದು ಸ್ವತಃ ಅನೂಷ್ಕಾ ಸ್ಪಷ್ಟನೆ ನೀಡಿದ್ದಾಳೆ. ಈ ಮಧ್ಯೆ ಈ ಚಿತ್ರದಲ್ಲಿ ಸಣ್ಣದಾದರೂ ಮುಖ್ಯವಾದ ರೊಮ್ಯಾನ್ಸ್ ಇರುವ ಪಾತ್ರವೊಂದರಲ್ಲಿ ನಟಿಸಲು ಪ್ರಭಾಸ್ ಒಪ್ಪಿದ್ದಾನೆ ಎಂಬ ಸುದ್ದಿಯೂ ಬಂದಿದೆ. ಬಾಹುಬಲಿ ಚಿತ್ರದ ಅನೂಷ್ಕಾ– ಪ್ರಭಾಸ್ ಜೋಡಿಯ ಕೆಮಿಸ್ಟ್ರಿ ಪ್ರೇಕ್ಷಕರ ಮೇಲೆ ಬಹುದೊಡ್ಡ ಪ್ರಭಾವ ಬೀರಿದೆ. ಹಾಗೆಂದೇ ಈ ಜೋಡಿ ಇನ್ನಷ್ಟು ಹೊಸ ಚಿತ್ರಗಳಲ್ಲಿ ಒಟ್ಟಿಗೆ ನಟಿಸುವ ಸುದ್ದಿ ಕೇಳಿ ಬರುತ್ತಿದೆ.

ಅದಕ್ಕಿಂತ ದೊಡ್ಡ ಗಾಸಿಪ್ ಅನೂಷ್ಕಾ ಮದುವೆಯದ್ದು. ಶೀಘ್ರವೇ ಪ್ರಭಾಸ್ ಮತ್ತು ಅನೂಷ್ಕಾ ಮದುವೆ ಆಗಲಿದ್ದಾರೆ ಎನ್ನುವ ಸುದ್ದಿ ದಟ್ಟವಾಗಿ ಹಬ್ಬಿದೆ. ತಾವಿಬ್ಬರೂ ಒಳ್ಳೆಯ ಸ್ನೇಹಿತರು ಎಂದು ಅನೂಷ್ಕಾ ಹೇಳಿದ್ದರೂ ಸಿನಿಪ್ರೇಮಿಗಳು ಅದನ್ನು ನಂಬಲು ಸಿದ್ಧರಿಲ್ಲ! ಬಾಹುಬಲಿ 2 ಚಿತ್ರದ ಶೂಟಿಂಗ್ ಸಲುವಾಗಿ ಇಬ್ಬರೂ ತಮ್ಮ ಮದುವೆಯ ಪ್ರಸ್ತಾಪಗಳನ್ನು ಮುಂದೂಡಿದ ಸುದ್ದಿ ಒಂದು ವರ್ಷದಿಂದ ಚಾಲ್ತಿಯಲ್ಲಿದೆ. ಪ್ರಭಾಸ್‌ಗೆ ಬಾಹುಬಲಿ 2 ಶೂಟಿಂಗ್ ಸಂದರ್ಭದಲ್ಲೇ ಸುಮಾರು 600 ರಷ್ಟು ಮದುವೆ ಪ್ರಸ್ತಾಪಗಳು ಬಂದಿದ್ದುವಂತೆ! ಆದರೆ ಆತ ಅದ್ಯಾವುದನ್ನೂ ಒಪ್ಪದೆ ಇರಲು ಅನೂಷ್ಕಾ ಜತೆಗಿನ ಬಾಂಧವ್ಯವೇ ಕಾರಣ ಎನ್ನುವ ಗಾಳಿಸುದ್ದಿಗಳೂ ಬಲವಾಗಿವೆ.

ಅರುಂಧತಿ, ರುದ್ರಮಾದೇವಿ ಮುಂತಾದ ಪಾತ್ರಗಳಲ್ಲಿ ಮಿಂಚಿರುವ ಅನೂಷ್ಕಾಳಿಗೆ ಆ ಮಾದರಿಯ ಪಾತ್ರಗಳೇ ಮತ್ತೆ ಮತ್ತೆ ಬರುವುದು ಇಷ್ಟವಿಲ್ಲವಂತೆ. 'ನನ್ನ ಕೈಯಲ್ಲಿ ಇರುವ ಸಿನಿಮಾಗಳನ್ನು ಮುಗಿಸಲು ಇನ್ನೂ ಒಂದೆರಡು ವರ್ಷಗಳು ಬೇಕಾಗಬಹುದು. ಅಲ್ಲಿವರೆಗೆ ಮದುವೆ ಬಗ್ಗೆ ಯೋಚಿಸಲು ಪುರುಸೊತ್ತಿಲ್ಲ' ಎಂದಿದ್ದಾಳೆ ಅನೂಷ್ಕಾ. ಅದೇ ವೇಳೆ ಪ್ರಭಾಸ್ ಜತೆ ಪತ್ರಕರ್ತರು 'ಬಾಹುಬಲಿ ಮುಗಿಯಿತಲ್ಲ, ಯಾವತ್ತು ನಿಮ್ಮ ಮದುವೆ?' ಎಂದು ಕೇಳಿದ್ದಾರೆ. 'ಯಾರಿಗ್ಗೊತ್ತು?' ಎಂದಿದ್ದಾನೆ ಪ್ರಭಾಸ್. ಇಬ್ಬರೂ ಮದುವೆ ಆಗುತ್ತಾರೆ ಎನ್ನುವ ಗಾಳಿಸುದ್ದಿ ಹಬ್ಬದೆ ಇನ್ನೇನಾದೀತು?

■ ಬಿಂದು